ಅಮ್ಮ ಈಗ ತಾನಾಗಿಯೇ ಕೇಳಿದ್ದಳು, 'ಏನೋ ಮಗೂ... ಏನಾಯ್ತು?' ತಾಯಿಯ ಕಾಳಜಿಯ ಮಾತು ಕೇಳಿದ್ದೇ ಅವನಲ್ಲಿ ದುಃಖ ಉಮ್ಮಳಿಸಿತ್ತು. 'ಎಲ್ಲ ಹೋಯ್ತಮ್ಮ... ನನಗೂ ನಿನಗೂ ಏನೂ ಇಲ್ಲ. ಆಸ್ತಿ ಬಿಡು.. ಬ್ಯಾಂಕಿನಲ್ಲಿ ಇದ್ದ ದುಡ್ಡನ್ನೂ ನಾವು ಮುಟ್ಟುವ ಹಾಗಿಲ್ಲ. ಅಪ್ಪ ಎಲ್ಲವನ್ನೂ ತಮ್ಮನ ಹೆಸರಿಗೇ ಮಾಡಿಟ್ಟಿದ್ದಾರೆ.'

'ಅಲ್ಲ, ಅವನು ಇಲ್ಲಿ ಇಲ್ಲವೇ ಇಲ್ಲವಲ್ಲಪ್ಪ...'

'ಆದರೆ, ಎಲ್ಲವನ್ನೂ ಅವನ ಹೆಸರಿಗೇ ಮಾಡಿದ್ದಾರಮ್ಮ... ಅದೇನು ಪ್ರೀತಿಯೋ ಅವನ ಮೇಲೆ.'

ಎಲ್ಲಿಯೋ ನೋಡುತ್ತಿದ್ದ ಆ ಅಮ್ಮನ ದೃಷ್ಟಿ ಏನನ್ನೂ ನೋಡುತ್ತಿರಲಿಲ್ಲ ಅನ್ನಿಸಿತು ಇವನಿಗೆ. ಏನೋ ಹೇಳಲು ಇವ ಬಾಯಿ ತೆರೆಯುವ ಮುನ್ನವೇ ಇವನತ್ತ ತಿರುಗಿದ ಆಕೆ ತೀರಾ ನಿರ್ಲಿಪ್ತವಾಗಿ ಮಾತಾಡಿದಳು. 'ಅಲ್ಲಪ್ಪ... ನೀನು ಅವರ ಮಗ ಅಲ್ಲವಲ್ಲ... ಅದಕ್ಕೇ ಯಾರಿಗೂ ಹೇಳದೆ ಆ ಆಸ್ತಿಯನ್ನೆಲ್ಲ ತಮ್ಮ ಮಗನ ಹೆಸರಿಗೆ ಮಾಡಿದ್ದಾರೆ.'


ಇವ ತೀರಾ ಗೊಂದಲದಲ್ಲಿ ಬಿದ್ದ. 'ಏನು ಹೇಳ್ತಾ ಇದ್ದೀಯಮ್ಮ ನೀನು... ನಾನು ನಿನ್ನ ಮಗ ಹೌದೋ ಅಲ್ಲವೋ...'

'ಹೌದು.'

'ಮತ್ತೆ ಅಪ್ಪನ ಮಗ ಅಲ್ಲ ಅಂತೀಯಲ್ಲಮ್ಮ...' ಅಮ್ಮನಿಗೆ ಮತಿ ಭ್ರಮಣೆಯೇನಾದರೂ ಆಗಿರಬಹುದೇ... ಎನ್ನುವ ಅನುಮಾನ ಬರುತ್ತಿರುವಂತೆಯೇ ಆ ಅಮ್ಮ ತಣ್ಣಗೆ ಹೇಳಿದ್ದಳು: 'ಮಗೂ ನೀನು ನನ್ನ ಮಗ ಅಷ್ಟೆ. ಆ ಅಪ್ಪನ ಮಗ ಅಲ್ಲ...'

'ಏನಮ್ಮ, ಏನು ಹೇಳ್ತಿದೀಯ...'

'ಹೌದು ಮಗೂ. ನೀನು ಹುಟ್ಟಿದ ಕೂಡಲೇ ನಿನ್ನಪ್ಪ ತೀರಿ ಹೋದರು. ನಾನು ನಿನ್ನನ್ನು ಸಾಕಿಕೊಂಡು ಹಾಗೆಯೇ ಇದ್ದು ಬಿಡುವ ಎಂದು ಬಯಸಿದ್ದೆ. ಆದರೆ, ನಿನಗೆ ನಾಲ್ಕು ತಿಂಗಳು ಕಳೆಯುತ್ತಿದೆ ಎನ್ನುವಾಗ ಅವರೊಬ್ಬರು ಬಂದರು. ಅವರ ಹೆಂಡತಿಯೂ ಸತ್ತು ಹೋಗಿದ್ದಳಂತೆ. ಸಾಯುವಾಗ ವರ್ಷದ ಹೆಣ್ಣುಮಗುವೊಂದೂ ಇತ್ತು ಅವರಿಗೆ. ಹಾಗೆ ಬಂದವರು, 'ಒಪ್ಪಿಗೆಯಿದ್ದರೆ ನಿನ್ನನ್ನು ಮದುವೆ ಮಾಡಿಕೊಳ್ಳುತ್ತೇನೆ. ನನ್ನ ಮಗಳನ್ನೂ ನಿನ್ನ ಮಗನನ್ನೂ ಒಟ್ಟಿಗೇ ಬೆಳೆಸೋಣ. ಬೇರೆ ಮಕ್ಕಳೂ ಬೇಡ ನಮಗೆ' ಎಂದರು. ಅವರೇ ಈ ನಿನ್ನಪ್ಪ. ನಾನೂ ಒಪ್ಪಿದೆ. ನಮ್ಮ ಮನೆಯವರು ಅವರ ಮನೆಯವರು ಎಲ್ಲ ಒಪ್ಪಿದರು. ಮದುವೆಯೂ ಆಯ್ತು. ಆದರೆ, ಮದುವೆ ಆಗಿ ಎರಡು ವರ್ಷದೊಳಗೇ ಅವರ ಮಗಳು ಅದೇನೋ ದೊಡ್ಡ ಕಾಯಿಲೆಗೆ ತುತ್ತಾದಳು. ಆಸ್ಪತ್ರೆಗೆ ಸೇರಿಸಿದರೂ, ನಾವಿಬ್ಬರೂ ಎಷ್ಟು ಜತನದಿಂದ ಆರೈಕೆ ಮಾಡಿದರೂ ಉಳಿಯಲಿಲ್ಲ. ಆ ಮಗಳು ಸತ್ತ ಮರು ವರ್ಷವೇ ಈ ನಿನ್ನ ತಮ್ಮ ಹುಟ್ಟಿದ್ದು. ಮೊದಲಿನಿಂದಲೂ ಆ ನಿನ್ನ ತಮ್ಮನ ಮೇಲೆಯೇ ಪ್ರೀತಿ ಅವರಿಗೆ. ಹಾಗೆಂದು ನೀನು ಅವರ ಮಗನಲ್ಲ ಎಂದು ನಿನಗೆ ತಿಳಿಯಲೇ ಕೂಡದು ಎನ್ನುವುದೂ ಅವರ ನಿರ್ಧಾರವೇ' ಅಮ್ಮ ಇಷ್ಟನ್ನು ಹೇಳಿ ಸುಸ್ತಾದವಳಂತೆ ಕುಳಿತೇ ಬಿಟ್ಟಳು. ಇವನೂ...




**ಪಿ.ಪಿ. ಉಪಾಧ್ಯ**

ಭಾರತೀಯ ಜೀವ ವಿಮಾ ನಿಗಮದಲ್ಲಿ ಹಿರಿಯ ವಿಭಾಗಾಧಿಕಾರಿಯಾಗಿ ನಿವೃತ್ತರಾಗಿದ್ದಾರೆ. ಅವರ 100ಕ್ಕೂ ಹೆಚ್ಚು ಕತೆಗಳು ಪತ್ರಿಕೆಗಳಲ್ಲಿ ಅಚ್ಚಾಗಿವೆ. 'ಯಶೋದೆ' ಮತ್ತು 'ಹೊಸ ಬೆಳಕು' ಎಂಬ ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟವಾಗಿವೆ. 'ತ್ಯಾಂಪಣ್ಣನ ಸೊಸೆಯಂದಿರು' ಎಂಬ ಕಾದಂಬರಿ, 'ಕಳೆದುಕೊಂಡಿದ್ದು ಮತ್ತು ಇತರ ಕತೆಗಳು' ಎಂಬ ಕಥಾಸಂಕಲನ ಪ್ರಕಟವಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.